

# ಮರೆವು

■ **ಜಿ.ಎಸ್. ಸುಶೀಲಾದೇವಿ ಆರ್. ರಾವ್**
ಕಲೆ: ಈಶ್ವರ ಬಡಿಗೇರ

ಮರೆವು ಎಲ್ಲಾ ಮನುಷ್ಯರಿಗೂ ಬರುತ್ತದೆ. ಅತೀ ಬುದ್ಧಿವಂತನೂ ಮರೆಯುವುದು ಸಾಮಾನ್ಯ. ನನ್ನ ಪರಿಚಿತ ಅಧ್ಯಾಪಕರೊಬ್ಬರು ಹೇಳಿದ್ದು, 'ಮರೆವು ನಿಜಕ್ಕೂ ದೇವರಿತ್ತ ವರ. ನಮ್ಮ ಬದುಕಿನಲ್ಲಿ ನಡೆದದ್ದನ್ನೆಲ್ಲಾ ನೆನಪಿಟ್ಟುಕೊಂಡಿದ್ದರೆ ನಮ್ಮ ತಲೆ ಭಾರವಾಗಿರುತ್ತಿತ್ತು. ಅತಿ ಮುಖ್ಯವಾದವು ನೆನಪಿನಲ್ಲಿರುತ್ತವೆ. ಮುಖ್ಯವಲ್ಲದವು ಮರೆತು ಹೋಗುತ್ತವೆ.'

ಮರೆವಿನಿಂದ ಅನಾಹುತವೂ ಆಗಬಹುದು. ಉಪಕಾರವೂ ಆಗಬಹುದು. ತಮಾಷೆಯಾಗಿ ನಗಲೂಬಹುದು.

ನಾವು ಅಣ್ಣನ ಸಂಸಾರದೊಡನೆ ಹಂಪಿಗೆ ಹೋಗಿದ್ದೆವು. ವಿರೂಪಾಕ್ಷೇಶ್ವರನ ದರ್ಶನದ ನಂತರ ಭುವನೇಶ್ವರಿ ದೇಗುಲಕ್ಕೆ ಹೋದೆವು. ಅಲ್ಲೇ ಕುಳಿತು ತುಸುಹೊತ್ತು ಹರಟಿದೆವು. ನನ್ನ ಮೂರು ವರ್ಷದ ಮಗ ಆನಂದ್ ಕಂಬಕ್ಕೊರಗಿ ಮೌನವಾಗಿ ಭುವನೇಶ್ವರಿಯ ವಿಗ್ರಹವನ್ನೇ ನೋಡುತ್ತ ಕುಳಿತಿದ್ದ. ನಂತರ ಎಲ್ಲರೂ ಎದ್ದೆವು. ಸಾಕಷ್ಟು ದೂರ ನಡೆದ ಮೇಲೆ ಪಕ್ಕನೆ ಮಗುವಿನ ನೆನಪಾಯಿತು. ಆನಂದ್ ಅಪ್ಪನ ಬಳಿ ಇದ್ದಾನೆ ಎಂದು ನಾನು, ಅಮ್ಮನ ಬಳಿ ಇರಬಹುದು ಎಂದು ಅವನ ಅಪ್ಪ ಭಾವಿಸಿದ್ದೆವು. ಇಬ್ಬರ ಬಳಿಯೂ ಮಗು ಇಲ್ಲ. ನಮ್ಮ ಮರೆವಿಗೆ ಗಾಬರಿಯಾಗಿ ದಾಪುಗಾಲು ಹಾಕಿ ಭುವನೇಶ್ವರಿಯ ಗುಡಿಯ ಬಳಿ ಬಂದರೆ ಮಗು ಹಾಗೆಯೇ ಕಂಬಕ್ಕೊರಗಿ ಭುವನೇಶ್ವರಿಯನ್ನೇ ನೋಡುತ್ತಿತ್ತು. ಸದ್ಯ ಎಲ್ಲೂ ಹೋಗಿಲ್ಲ, ಅತ್ತಿಲ್ಲ ಎಂದು ಅವನನ್ನೆತ್ತಿಕೊಂಡು ಹೊರಬಂದೆವು. ನಮ್ಮ ಮರೆವಿನಿಂದಾಗಿ ಮಗು ಅಮ್ಮ, ಅಪ್ಪ ಎಲ್ಲಿ ಎಂದು ಗಾಬರಿಯಾಗಿ ಹುಡುಕಿಕೊಂಡು ಅಲ್ಲೆಲ್ಲಾದರೂ ಓಡಾಡಿ ದೂರ ಹೋಗಿದ್ದರೆ, ಕೈಗೆ ಸಿಗದಿದ್ದರೆ ಎಂದು ಭಯವಾಗಿತ್ತು.

ವರ್ಷಗಳುರುಳಿವೆ. ಅವನು ಅಂದು ಭುವನೇಶ್ವರಿಯನ್ನು ಗಂಟೆಗಟ್ಟಲೆ ಹಾಗೆ ಕೂತು ನೋಡಿದ್ದರಿಂದಲೇ ಅವನಿಗೆ ಭುವನೇಶ್ವರಿ ಒಲಿದು ಅವನು ಬರಹಗಾರನಾದ ಎಂದು ಅವನ ಸೋದರಮಾವ ಎಲ್ಲರ ಬಳಿ ಹೇಳುತ್ತಿದ್ದರು.

ನನ್ನ ಪರಿಚಯದ ಗೆಳತಿ ಹೇಳಿದ್ದು. ಅವಳು ಮಲೆನಾಡಿನಲ್ಲಿ ಹುಟ್ಟಿ ಬಯಲುಸೀಮೆಗೆ ಸೊಸೆಯಾಗಿ ಬಂದವಳು. ಅವಳ ತವರಿನಲ್ಲಿ